# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು-1

**ಸಂಖ್ಯೆ: ಅ9(1)ಆ5(8) ಶಾಶಿಹೆಜಾತಿ.23/89-90 ದಿನಾಂಕ: 02-05-2000**

## ಸುತ್ತೋಲೆ

**ವಿಷಯ: ವಿದ್ಯಾರ್ಥಿಗಳ ಶಾಲಾ ದಾಖಲಾತಿಗಳಲ್ಲಿ ವಿದ್ಯಾರ್ಥಿಗಳ ಹೆಸರು, ತಂದೆಯ ಹೆಸರು, ದತ್ತು ತಂದೆಯ ಹೆಸರು, ಜಾತಿ, ಹುಟ್ಟಿದ ದಿನಾಂಕ ಮುಂತಾದವುಗಳನ್ನು ಬದಲಾವಣೆ ಮಾಡುವ ಬಗ್ಗೆ.**

**ಉಲ್ಲೇಖ: ದಿನಾಂಕ: 17-7-99 ರಂದು ಸರ್ಕಾರದ ಹಂತದಲ್ಲಿ ನಡೆದ ಸಭೆಯ ನಡವಳಿಗಳು (ಸಂಖ್ಯೆ: ಇಡಿ 106.ಡಿಟಿಬಿ 93 (ಭಾಗ 3)**

&&&

ಶಾಲಾ ದಾಖಲಾತಿಗಳಲ್ಲಿ ವಿದ್ಯಾರ್ಥಿಯ ಹೆಸರು, ಹುಟ್ಟಿದ ದಿನಾಂಕ, ಜಾತಿ ಮೊದಲಾದವುಗಳನ್ನು ತಿದ್ದುಪಡಿ ಮಾಡುವುದಕ್ಕೆ ಸಂಬಂಧಿಸಿದಂತೆ ಸರ್ಕಾರ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಮಿತವಾದ ಅಧಿಕಾರ ನೀಡುವ ಬಗ್ಗೆ ಪರಿಶೀಲಿಸಿದೆ. ಸಾರ್ವಜನಿಕರಿಂದ 1ನೇ ತರಗತಿಯಿಂದ 10ನೇ ತರಗತಿವರೆವಿಗೂ ಓದುತ್ತಿರುವ ವಿದ್ಯಾರ್ಥಿಗಳ ಹೆಸರು, ಹುಟ್ಟಿದ ದಿನಾಂಕ, ಜಾತಿ ಬದಲಾವಣೆ ಕುರಿತು ಅನೇಕ ಪೋಷಕರು ಅರ್ಜಿಗಳನ್ನು ಸಲ್ಲಿಸುತ್ತಿದ್ದು ಅನೇಕ ಲೋಪದೋಷಗಳು, ನ್ಯೂನತೆಗಳು ಕಂಡು ಬರುತ್ತದೆ. ಇಂತಹ ಅನೇಕ ಪ್ರಕರಣಗಳು ದಿನನಿತ್ಯ ಕಂಡು ಬರುತ್ತಿದ್ದು, ಬಹುಪಾಲು ಪ್ರಕರಣಗಳು ಇತ್ಯರ್ಥವಾಗದೆ ಬಾಕಿ ಉಳಿದಿರುವುದು ಹಾಗೂ ಸ್ಪಷ್ಟ ಮಾರ್ಗಸೂಚನೆಗಳಿಲ್ಲದೆ ಪ್ರತಿ ಹಂತದಲ್ಲಿಯೂ ತಡವಾಗುತ್ತಿರುವುದು ಕಂಡು ಬಂದಿದೆ. ಆದುದರಿಂದ ಮಾನ್ಯ ಕಾರ್ಯದರ್ಶಿಯವರು ದಿನಾಂಕ: 14-7-99 ರಂದು ಸಂಬಂಧಿಸಿದ ಅಧಿಕಾರಿಗಳ ಸಭೆಯನ್ನು ಕರೆದು ಇಂತಹ ಪ್ರಕರಣಗಳನ್ನು ಹೇಗೆ ಇತ್ಯರ್ಥಪಡಿಸಬೇಕೆಂದು ಕೂಲಂಕುಷವಾಗಿ ಚರ್ಚಿಸಿಒಂದು ನಿರ್ಣಯಕ್ಕೆ ಬಂದು ಈ ಬದಲಾವಣೆಯ ಅಧಿಕಾರವನ್ನು ಆಯಾ ಜಿಲ್ಲಾ ಉಪನಿರ್ದೇಶಕರಿಗೆ ನೀಡಬೇಕೆಂದು ಸ್ಪಷ್ಟವಾದ ಮಾರ್ಗಸೂಚಿಯನ್ನು ಹೊರಡಿಸಬೇಕೆಂದು ನಿರ್ಣಯವನ್ನು ಕೈಗೊಳ್ಳಲಾಯಿತು. ಅದರಂತೆ ವಿದ್ಯಾರ್ಥಿಗಳ ಹೆಸರು, ಜನ್ಮದಿನಾಂಕ ಹಾಗೂ ತಂದೆಯ ಹೆಸರನ್ನು ಬದಲಾಯಿಸಲು ಕೈಗೊಳ್ಳಬೇಕಾದ ಕ್ರಮವನ್ನು ಈ ಕೆಳಕಾಣಿಸಿದಂತೆ ಸೂಚಿಸಿದೆ.

1) ಜನ್ಮ ದಿನಾಂಕ, ಸ್ವಂತ ಹೆಸರು, ತಂದೆಯ ಹೆಸರುಗಳ ತಿದ್ದುಪಡಿಗೆ ಸಂಬಂಧಿಸಿದಂತೆ ನ್ಯಾಯಾಲಯದಿಂದ ಡಿಕ್ರಿ ಪಡೆದಂತಹ ಪ್ರಕರಣಗಳನ್ನು ಮಾತ್ರ ಪರಿಗಣಿಸಿ ಶಾಲಾ ದಾಖಲಾತಿ ನಿಯಮಗಳಿಗೆ ವಿರುದ್ಧವಾಗದಂತೆ ಎಚ್ಚರಿಕೆ ವಹಿಸಿ ತಿದ್ದುಪಡಿಗೆ ಅನುಮತಿ ನೀಡುವ ಅಧಿಕಾರವನ್ನು ಈ ಸುತ್ತೋಲೆ ಹೊರಡಿಸಿದ

ದಿನಾಂಕದಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರಿಗೆ ನೀಡಲಾಗಿದೆ.

2) ಜಾತಿ ತಿದ್ದುಪಡಿ ಮಾಡಬೇಕಾದಲ್ಲಿ ನ್ಯಾಯಾಲಯದಿಂದ ಡಿಕ್ರಿ ಪಡೆದ ಪ್ರಕರಣಗಳಲ್ಲಿ ಮಾತ್ರ ಡಿಸ್ಟ್ರಿಕ್ಟ್ ವೆರಿಫಿಕೇಷನ್ ಕಮಿಟಿಯ ಅಭಿಪ್ರಾಯವನ್ನು ಪಡೆದು ಸದರಿ ಸಮಿತಿಯ ಅಭಿಪ್ರಾಯದಂತೆ ಉಪನಿರ್ದೇಶಕರು ಜಾತಿ ತಿದ್ದುಪಡಿಗೆ ಅನುಮತಿ ನೀಡಬೇಕು. ನ್ಯಾಯಾಲಯದ ಡಿಕ್ರಿ ಪಡೆಯದ ಮತ್ತು ಡಿಸ್ಟ್ರಿಕ್ಟ್ ವೆರಿಫಿಕೇಷನ್ ಸಮಿತಿಯ ಅಭಿಪ್ರಾಯವಿಲ್ಲದ ಪ್ರಕರಣಗಳಲ್ಲಿ ಜಾತಿ ತಿದ್ದುಪಡಿಗೆ ಯಾವುದೇ ಹಂತದಲ್ಲಿಯೂ ಅವಕಾಶವಿರುವುದಿಲ್ಲ.

3) ಭಾರತ ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ಆದೇಶದ ಪ್ರಕಾರ ಮಕ್ಕಳ ತಾಯಂದಿರೂ ನೈಜಪೋಷಕರಾಗಿರುವುದರಿಂದ ಮುಂದಿನ ಶೈಕ್ಷಣಿಕ ವರ್ಷದಿಂದ ಶಾಲೆಯ ಎಲ್ಲಾ ಹಂತಗಳಲ್ಲಿ ಮಕ್ಕಳ ದಾಖಲಾತಿ ಮಾಡಿಕೊಳ್ಳುವಾಗ ಹಾಗೂ 7ನೇ ತರಗತಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಗಳನ್ನು ತೆಗೆದುಕೊಳ್ಳುವಾಗ, ತಂದೆಯ ಹೆಸರಿನ ಜೊತೆ ತಾಯಿಯ ಹೆಸರನ್ನೂ ಸಹ ನಮೂದಿಸಲು ಎಲ್ಲಾ ಇಲಾಖಾ ಅಧಿಕಾರಿಗಳು ಕ್ರಮಕೈಗೊಳ್ಳಬೇಕು.

4) ಎಸ್.ಎಸ್.ಎಲ್.ಸಿ ಆದ ನಂತರ ಶಾಲಾ ದಾಖಲಾತಿಯಲ್ಲಿರುವಂತೆ ನಮೂದಿಸಿರುವ ಮಾಹಿತಿಯಲ್ಲಿ ಸಣ್ಣಪುಟ್ಟ ತಪ್ಪುಗಳನ್ನು ಹೊರತುಪಡಿಸಿ, ತಂದೆಯ ಹೆಸರು, ಜಾತಿ ಬದಲಾವಣೆ, ಜನ್ಮ ದಿನಾಂಕ ತಿದ್ದುಪಡಿ, ಅಭ್ಯರ್ಥಿಯಹೆಸರಿನ ಬದಲಾವಣೆ ಇವುಗಳಿಗೆ ಸಂಬಂಧಿಸಿದಂತೆ ಬದಲಾವಣೆ/ ತಿದ್ದುಪಡಿಯನ್ನು ಬಯಸಿದಲ್ಲಿ ಅಭ್ಯರ್ಥಿಗಳು ನ್ಯಾಯಾಲಯದ ಡಿಕ್ರಿಯನ್ನು ಪಡೆದಲ್ಲಿ ಮಾತ್ರ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರಿಗೆ ತಿದ್ದುಪಡಿಗೆ ಅನುಮತಿ ನೀಡುವ ಅಧಿಕಾರವನ್ನು ಈ ಮೂಲಕ ನೀಡಿದೆ.

5) ದತ್ತು ಪ್ರಕರಣಗಳಲ್ಲಿ ನ್ಯಾಯಾಲಯದಿಂದ ಡಿಕ್ರಿ ಪಡೆದು ನೊಂದಣಿ ದಾಖಲಾತಿಯನ್ನು ಒದಗಿಸಿದಾಗ ಮಾತ್ರ ದತ್ತು ತಂದೆ/ತಾಯಿಯ ಹೆಸರನ್ನು ಶಾಲಾ ದಾಖಲಾತಿಗಳಲ್ಲಿ ಎಸ್.ಎಸ್.ಎಲ್.ಸಿ ದಾಖಲಾತಿಗಳಲ್ಲಿ ನಮೂದಿಸಲು ಉಪನಿರ್ದೇಶಕರು ಅನುಮತಿ ನೀಡಬೇಕು.

6) ಮನವಿದಾರರು ರಾಜ್ಯ ಸರ್ಕಾರದ ನೌಕರರಾಗಿದ್ದಲ್ಲಿ 1974 ಏಜ್ ಡಿಟರ್ಮಿನೇಷನ್ ಆಕ್ಟ್ ಪ್ರಕಾರ ನ್ಯಾಯಾಲಯದ ಪರಿಧಿಯಲ್ಲಿ ಬರುವುದಿಲ್ಲವಾದ ಕಾರಣ ಹಾಗೂ ಸೇವೆಗೆ ಸೇರಿ ಒಂದು ವರ್ಷದೊಳಗಾಗಿ ಮನವಿ ಸಲ್ಲಿಸದಿದ್ದಲ್ಲಿ ಅಂತಹ ಪ್ರಕರಣಗಳನ್ನು ನೇರವಾಗಿ ತಿರಸ್ಕರಿಸಬಹುದಾಗಿದೆ. ಕೇಂದ್ರ ಸಾರ್ವಜನಿಕ ಉದ್ದಿಮೆಗಳ ನೌಕರರಿಗೂ ಸಹ ಈ ಆದೇಶ ಅನ್ವಯಿಸುತ್ತದೆ.

(ಸಹಿ)
ನಿರ್ದೇಶಕರು(ಪ್ರೌಢ ಶಿಕ್ಷಣ)

This document was created with Win2PDF available at http://www.daneprairie.com.
The unregistered version of Win2PDF is for evaluation or non-commercial use only.